# ಎಲ್ಲರೊಳಗೊಂದಾಗು ಮಂಕುತಿಮ್ಮ ...



**ಪ್ರಕೃತಿಯಲ್ಲಿನ ಜೀವವೈವಿಧ್ಯವನ್ನು ಉಳಿಸುವ ಕೆಲಸವನ್ನು ಮನುಷ್ಯ ಪ್ರಜ್ಞಾಪೂರ್ವಕವಾಗಿ ಮಾಡದೇ ಹೋದರೆ, ಕೊರೊನಾದಂತಹ ಸೋಂಕುಗಳು ಹೆಚ್ಚುತ್ತವೆ. ಜೀವವೈವಿಧ್ಯದ ರಕ್ಷಣೆಯೆನ್ನುವುದು ಮನುಷ್ಯ ತನ್ನ ಉಳಿವಿಗಾಗಿ ನಡೆಸುವ ಪ್ರಯತ್ನವೂ ಹೌದು. ಜೈವಿಕ ವೈವಿಧ್ಯದ ಸಂರಕ್ಷಣೆ ಈ ಬಾರಿಯ ಜೂನ್ 5ರ 'ವಿಶ್ವ ಪರಿಸರ ದಿನ'ದ ಧ್ಯೇಯ.**

**■ ಸುಮಂಗಲಾ ಎಸ್. ಮುಮ್ಮಿಗಟ್ಟಿ**

ಇಡಿಯ ಜಗತ್ತು ಕೋವಿಡ್19 ವೈರಸ್ ಹಾವಳಿಗೆ ಸಿಲುಕಿ ನಲುಗುತ್ತಿರುವಾಗ ಮತ್ತೊಂದು ವಿಶ್ವ ಪರಿಸರ ದಿನ ಬಂದಿದೆ. ಅದೂ ಜೈವಿಕ ವೈವಿಧ್ಯದ ಸಂರಕ್ಷಣೆಯ ಗುರಿಯನ್ನು ಹೊತ್ತು. ಕೊರೊನಾ ದಾಳಿ ಇಲ್ಲದಿದ್ದಲ್ಲಿ ಪರಿಸರ, ಜೈವಿಕ ವೈವಿಧ್ಯದ ಸಂರಕ್ಷಣೆಗೆ 2020 ಅತ್ಯಂತ ಮಹತ್ವದ ವರ್ಷವಾಗಿರುತ್ತಿತ್ತು. ಜನವರಿಯಿಂದಲೇ ಜಾಗತಿಕ ಮಟ್ಟದ ಸಭೆಗಳು, ನಿರ್ಣಾಯಕ ಮಹತ್ವವಿದ್ದ ಜಾಗತಿಕ ಒಪ್ಪಂದಗಳ ಪ್ರಯತ್ನಗಳೂ ಯೋಜಿತವಾಗಿದ್ದವು. ಇನ್ನೂ ಕಾಯುವಂತಿಲ್ಲ, ಕೈ ಮೀರುವ ಮೊದಲೇ ಸಂರಕ್ಷಣೆಗೆ ಮುಂದಾಗೋಣ ಎಂದುಕೊಳ್ಳುತ್ತಿರುವಾಗಲೇ ಜಗತ್ತು ವಿಪತ್ತನ್ನು ಎದುರಿಸಬೇಕಾಗಿ ಬಂತು. ಅದೂ ಮಾನವ ಮಾಡಿದ ಪರಿಸರ ಮತ್ತು ವಿಶೇಷವಾಗಿ ಜೈವಿಕ ವೈವಿಧ್ಯದ ನಾಶದ ಫಲವಾದ ವಿಪತ್ತು. ಜೈವಿಕ ವೈವಿಧ್ಯದ ರಕ್ಷಣೆಯ ದೃಷ್ಟಿಯಿಂದ ಈ ವರ್ಷ ಸೂಪರ್ ವರ್ಷವಾಗಲಿದೆ ಎಂದೇ ಭಾವಿಸಲಾಗಿತ್ತು. ಇದರ ಸಂಭ್ರಮಾಚರಣೆ ಮಳೆಕಾಡುಗಳ ಒಂದು ಭಾಗವೂ ಆಗಿರುವ ಕೊಲಂಬಿಯಾದಲ್ಲಿ ಯೋಜಿತವೂ ಆಗಿದೆ. ಇದರೊಂದಿಗೆ ಜರ್ಮನಿ ಕೈಜೋಡಿಸಬೇಕಿದೆ. ಆದರೆ ಈ ವರ್ಷ ಮಳೆಕಾಡುಗಳು ನಾಶವಾಗಿರುವುದೂ ಕೂಡಾ ಒಂದು ವಿಪರ್ಯಾಸವೇ. ನಿಸರ್ಗ ನಾನಿನ್ನು ಕಾಯುವುದಿಲ್ಲ ಎಂಬಂತೆ ಮಾನವ ಜನಾಂಗಕ್ಕೆ ಒಂದು ಪೆಟ್ಟನ್ನು ಕೊಟ್ಟೇ ಬಿಟ್ಟಿತು. ಇದು ಎಚ್ಚರಿಕೆಯ ಕೊನೆಯ ಗಂಟೆ ಎನ್ನುತ್ತಾರೆ ಪರಿಸರ ಪರಿಣತರು.

ಎಲ್ಲಿಯೋ ಹುಟ್ಟಿದ ವೈರಸ್ಸಿಗೂ ಪರಿಸರಕ್ಕೂ ಜೈವಿಕ ವೈವಿಧ್ಯಕ್ಕೂ ಎಲ್ಲಿಯ ಸಂಬಂಧ ಎಂದು ಮೇಲ್ನೋಟಕ್ಕೆ ತೋರಬಹುದಾದರೂ, ಅತ್ಯಂತ ಸಂಕೀರ್ಣವಾಗಿರುವ ಜೀವಜಾಲದಲ್ಲಿ ಎಲ್ಲವೂ ಒಂದರೊಡನೊಂದು ಬೆಸೆದುಕೊಂಡಿವೆ. ಇವುಗಳಲ್ಲಿಯ ಒಂದು ಕೊಂಡಿ ಕಳಚಿದರೆ ಸಾಕು ಮತ್ತಾವುದೋ ತುದಿಯಲ್ಲಿ ಅದರ ಪರಿಣಾಮ ಕಂಡುಬರುತ್ತದೆ. ಈ ಜೈವಿಕ ವೈವಿಧ್ಯಕ್ಕೆ ಯಾಕಿಷ್ಟು ಮಹತ್ವ? ಇದು ಜೀವಿಗಳ ಬದುಕಿಗೆ ಅಷ್ಟೊಂದು ಅನಿವಾರ್ಯವೇ? ಎಂದೆನಿಸಬಹುದು. ಇದಕ್ಕೂ ಕೊರೊನಾಕ್ಕೂ ಇರುವ ಸಂಬಂಧವನ್ನ ತಿಳಿಯುವ ಮೊದಲು ಜೀವಜಾಲದಲ್ಲಿ ಜೈವಿಕ ವೈವಿಧ್ಯದ ಮಹತ್ವವನ್ನು ಅರಿಯಲು ಉದಾಹರಣೆಯೊಂದನ್ನು ನೋಡೋಣ.

ಕೆಲವು ವರ್ಷಗಳ ಹಿಂದೆ, ಕರ್ನಾಟಕದ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಅಧ್ಯಯನ ನಡೆಸುತ್ತಿದ್ದ ವಿಜ್ಞಾನಿಗಳಿಗೆ ಹೊಳೆಗೇರು ಮರವನ್ನು ಹೋಲುವ ಮರವೊಂದು ಕಂಡು ಬಂದಿತು. ಅನಕಾರ್ಡೆಸಿಯೇ ಅಂದರೆ ಮಾವಿನ ಮರದ ಕುಟುಂಬಕ್ಕೆ ಸೇರುವ ಇದನ್ನು ಅವರು ಅದೇ ಅರಣ್ಯ ಪ್ರದೇಶದಲ್ಲಿ ಹುಡುಕಾಡಿದಾಗ ಕೇವಲ ಬೆರಳೆಣಿಕೆಯಷ್ಟು ಮರಗಳು ಮಾತ್ರ ಅಲ್ಲಿದ್ದವು. ಅದರಲ್ಲಿ ಬಹಳಷ್ಟು ಮರಗಳು ಹಳೆಯವಾಗಿದ್ದವು. ಅನೇಕ ಮರಗಳಲ್ಲಿ ಯಾವುದೇ ಹೂವು ಹಣ್ಣುಗಳಿರಲಿಲ್ಲ. ಈ ಮರ ಆ ಪ್ರದೇಶದಲ್ಲಿ ಮಾತ್ರವಿದೆ ಎಂದರೆ ಇದು ಅಲ್ಲಿಗೆ ಮಾತ್ರ ಸೀಮಿತವಾಗಿದೆ (ಎಂಡಮಿಕ್) ಎಂದು ತಿಳಿದುಬಂದಾಗ ಅವರು ಆ ಮರಗಳಲ್ಲಿ ಹೂ ತಳೆದರೂ ಕಾಯಿ ಕಚ್ಚುತ್ತಿಲ್ಲವೇಕೆ? ಎನ್ನುವುದರ ಅಧ್ಯಯನ ಮುಂದುವರಿಸಿದರು. ಆಗ ಕಂಡು ಬಂದ ಅಂಶಗಳು ಕುತೂಹಲಕಾರಿಯಾಗಿದ್ದವು. ಆ ಮರದಲ್ಲಿಯ ಹೂವುಗಳ ಪರಾಗಸ್ಪರ್ಶಕ್ಕೆ 'ಮಲಬಾರ್ ನಿಂಫ್' ಎಂಬ ಚಿಟ್ಟೆಯೇ ಬೇಕಿತ್ತು. ಅಕಸ್ಮಾತ್ ಅವು ಕಾಯಾಗಿ ಹಣ್ಣಾದರೆ ಅವುಗಳ ಬೀಜ ಪ್ರಸರಣಕ್ಕೆ ಸಿಂಗಳೀಕ ಕಪಿಯೇ ಬೇಕಿತ್ತು. ಬದಲಾಗುತ್ತಿರುವ ಹವಾಮಾನದಿಂದಾಗಿ ಮಲಬಾರ್ ನಿಂಫ್ ಕಡಿಮೆಯಾದರೆ, ಸಿಂಗಳೀಕ ಕಪಿಗಳ ಮರೆಯಾಗುವಿಕೆ ಆ ಮರವನ್ನು ಅಳಿವಿನ ಅಂಚಿಗೆ ತಂದು ನಿಲ್ಲಿಸಿತ್ತು. ವಿಜ್ಞಾನಿಗಳ ಪ್ರಯತ್ನದಿಂದ ಪಶ್ಚಿಮ ಘಟ್ಟ ಪರಿಸರದಲ್ಲೀಗ (ಅದನ್ನು ಕತ್ತಲೆ ಕಾನ್ ಎಂದು ಕರೆದರು.) ಆ ಮರದ ಕೆಲ ಸಸ್ಯಗಳು ಬೆಳೆಯುತ್ತಿವೆ. ಆ ಮರಕ್ಕೆ ಸೆಮಿಕಾರ್ಪಸ್ ಕತ್ಲೆ ಕಾನನ್ ಸಿಯೇಸಿಸ್' ಎಂಬ ಹೆಸರನ್ನು ಕೊಡಲಾಗಿದೆ. ಜೀವಜಾಲದಲ್ಲಿ ಹೇಗೆ ಒಂದು ಜೀವಿ ತನ್ನ ಉಳಿವಿಗಾಗಿ ಇನ್ನೊಂದನ್ನು ಅವಲಂಬಿಸಿರುತ್ತದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಇಂತಹ ನಾವು ತಿಳಿಯದ ಎಷ್ಟೋ ಕೊಂಡಿಗಳು ಇರಬಹುದು. ನಾವು ಅದಕ್ಕಾಗಿಯೇ ಈ ಭೂಮಿಯ ಜೈವಿಕ ವೈವಿಧ್ಯವನ್ನು ರಕ್ಷಿಸಬೇಕಾಗಿದೆ. ಇಲ್ಲವಾದಲ್ಲಿ ಆಗುವ ಅನಾಹುತ ಕೊನೆಗೊಮ್ಮೆ ನಮ್ಮನ್ನೇ ತಟ್ಟುತ್ತದೆ. ಅಂಥಹದೇ ಒಂದು ಪರಿಣಾಮ ರೋಗಕಾರಕಗಳ ಹರಡುವಿಕೆ.

ಯಾವುದೇ ಒಂದು ಪ್ರದೇಶದಲ್ಲಿರುವ ಜೀವಿ ಪ್ರಭೇದಗಳ ಒಟ್ಟು ಮೊತ್ತವನ್ನು ಜೈವಿಕ ವೈವಿಧ್ಯ ಎನ್ನುತ್ತಾರೆ. ಮಳೆಕಾಡುಗಳು ಶ್ರೀಮಂತ ಜೈವಿಕ ವೈವಿಧ್ಯವನ್ನು ಹೊಂದಿದ್ದರೆ, ಮರುಭೂಮಿ